ಸಂಪಾದಕೀಯ

# ಶಾಸ್ತ್ರಸ್ವರೂಪಿ ಶ್ರೀರಾಮಕೃಷ್ಣ

**ಶಾಸ್ತ್ರಗಳ ಮಹತ್ವ:** ಹಿಂದೂಧರ್ಮದಲ್ಲಿ ಶಾಸ್ತ್ರಗಳ ಪ್ರಾಮುಖ್ಯತೆಯ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: " 'ಮಾನವನು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು, ಭಗವಂತನನ್ನು ಭಾವಿಸಬೇಕು, ಭಗವಂತನನ್ನು ನೋಡಬೇಕು, ಭಗವಂತನ ಜೊತೆಗೆ ಮಾತನಾಡಬೇಕು' – ಈ ಭಾವನೆಯನ್ನು ಉಸಿರಾಗಿರಿಸಿಕೊಳ್ಳದಿರುವ ಒಂದು ಧರ್ಮಗ್ರಂಥವೂ ಭಾರತದಲ್ಲಿಲ್ಲ. ಇದೇ ನೈಜ ಧರ್ಮ. ಭಾರತದ ವಾತಾವರಣವು ಭಗವದ್ದರ್ಶನದಿಂದ ಪುನೀತರಾಗಿರುವ ಸಂತಪುರುಷರ ಕಥೆಗಳಿಂದ ಕೂಡಿ ರಮಣೀಯವಾಗಿದೆ. ಈ ಬಗೆಯ ತತ್ತ್ವಗಳೇ ಇವರೆಲ್ಲರ ಧರ್ಮದ ಆಧಾರಭೂತವಾಗಿವೆ. ಹಾಗೂ ಪ್ರಾಚೀನ ಗ್ರಂಥಗಳು ಮತ್ತು ಶಾಸ್ತ್ರಗಳು ಆಧ್ಯಾತ್ಮಿಕ ಸತ್ಯಗಳೊಂದಿಗೆ ನೇರ ಸಂಪರ್ಕವನ್ನು ಹೊಂದಿದ ಜನರ ಬರಹಗಳಾಗಿವೆ. ಈ ಪುಸ್ತಕಗಳನ್ನು ಬುದ್ಧಿಜೀವಿಗಳ ಸಲುವಾಗಿ ಬರೆದಿಲ್ಲ, ಅವನ್ನು ಕೇವಲ ತರ್ಕದಿಂದ ಅರ್ಥಮಾಡಿಕೊಳ್ಳಲೂ ಸಾಧ್ಯವಾಗದು. ಏಕೆಂದರೆ, ತಾವು ಬರೆದ ಸತ್ಯಗಳನ್ನು ಕಣ್ಣಾರೆ ಕಂಡವರು ಮಾತ್ರವೇ ಅವುಗಳನ್ನು ದಾಖಲಿಸಿದ್ದಾರೆ. ಹೀಗಾಗಿ ಆ ಉನ್ನತಸ್ತರಕ್ಕೆ ಏರಿದವರು ಮಾತ್ರವೇ ಇವುಗಳನ್ನು ಅರ್ಥಮಾಡಿಕೊಳ್ಳಬಲ್ಲರು."



ಶಾಸ್ತ್ರಗಳು ಮಾರ್ಗದರ್ಶಿ ಗ್ರಂಥಗಳು. ಒಬ್ಬ ಆಧ್ಯಾತ್ಮಿಕ ಸಾಧಕ ಅವುಗಳ ಸಹಾಯವನ್ನು ಪಡೆದುಕೊಂಡು, ಭಗವಂತನನ್ನು ಕುರಿತು ತಾನು ತಳೆಯಬೇಕಾದ ಮಾರ್ಗದ ಬಗ್ಗೆ ಅರಿವನ್ನು ಪಡೆದುಕೊಳ್ಳುತ್ತಾನೆ. ಹಾಗೆಯೇ ಶಾಸ್ತ್ರಗಳು ಆ ಅನುಭವಗಳ ಅಧಿಕೃತತೆಯನ್ನು ಖಚಿತಪಡಿಸುವಲ್ಲಿ ಆತನಿಗೆ ಸಹಾಯ ನೀಡುತ್ತವೆ. ಆದರೆ ಶ್ರೀರಾಮಕೃಷ್ಣರ ವಿಷಯದಲ್ಲಿ ನಡೆದದ್ದು ತದ್ವಿರುದ್ಧವಾದ ಪ್ರಕ್ರಿಯೆ. ಅವರು ತಮ್ಮ ಆಧ್ಯಾತ್ಮಿಕ ಸಾಧನೆಗಳನ್ನು ಕೈಗೊಳ್ಳುವ ಮೊದಲು ಯಾವ ಶಾಸ್ತ್ರಗ್ರಂಥಗಳನ್ನೂ ಅಧ್ಯಯನ ಮಾಡಲಿಲ್ಲ. ಹಾಗೆಯೇ ತಮ್ಮ ದಿವ್ಯ ಅನುಭವಗಳ ಅಧಿಕೃತತೆಯ ವಿಷಯದಲ್ಲಿ ಯಾವ ಲಕ್ಷ್ಯವನ್ನೂ ತೋರಲಿಲ್ಲ. ಆದರೆ ಕಾಲ ಸರಿದಂತೆ, ಅವರ ಆ ದಿವ್ಯ ಅನುಭಾವಿಕ ದರ್ಶನಗಳೇ ಪ್ರಾಚೀನ ಶಾಸ್ತ್ರಗ್ರಂಥಗಳಿಗೆ ಅಧಿಕೃತತೆಯನ್ನು ತಂದುಕೊಟ್ಟವು. ಇದನ್ನು ವಿವಿಧ ದೃಷ್ಟಿಕೋನಗಳ ಮೂಲಕ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

**ಐತಿಹಾಸಿಕ ದೃಷ್ಟಿಕೋನ:** ಶ್ರೀರಾಮಕೃಷ್ಣರ ವ್ಯಕ್ತಿತ್ವ ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿತ್ತು. ಹೀಗಾಗಿ ಅವರ ಭಾವನೆಗಳು ಭಾರತೀಯ ಚಿಂತನೆಗೆ ಹೊಸದೇನೂ ಅಲ್ಲವೆಂದೇ ಹೇಳಬೇಕು. ಆದರೆ, ಅನೇಕ ಮಹಾನ್ ಸಂತರ ಮತ್ತು ಪ್ರವಾದಿಗಳ ನಡುವೆ ಅವರನ್ನು ವಿಶಿಷ್ಟರನ್ನಾಗಿಸುವ ಅಂಶವಾದರೂ ಏನು? ಅವರ ವ್ಯಕ್ತಿತ್ವದಲ್ಲಿ ಭಾರತೀಯ ಪ್ರಜ್ಞೆಯು ಪರಿಪೂರ್ಣವಾಗಿ ಮತ್ತು ಪ್ರಮಾಣೀಭೂತವಾಗಿ ಪ್ರಕಟಗೊಂಡಿತ್ತೆಂಬುದೇ ಅವರ ವೈಶಿಷ್ಟ್ಯ. ಭಾರತೀಯ ಮನಸ್ಸು ಸತ್ಯದ ಭಾಗಶಃ ಅಭಿಪ್ರಾಯಗಳಲ್ಲಿ ಸಮಾಧಾನ ಹೊಂದುವುದಿಲ್ಲ. ನಿತ್ಯತತ್ತ್ವದ ಸಮನ್ವಯ ಮತ್ತು ಅಖಂಡ ಅಭಿವ್ಯಕ್ತಿಗಾಗಿ ಅದು ಹಾತೊರೆಯುತ್ತದೆ. ಶ್ರೀರಾಮಕೃಷ್ಣರು ಅಂಥ ಆಧ್ಯಾತ್ಮಿಕ ಆಕಾಂಕ್ಷೆ ಮತ್ತು ಸಾರ್ಥಕತೆಯ ಪರಿಶುದ್ಧ ನಿದರ್ಶನವಾಗಿ ಕಂಗೊಳಿಸುತ್ತಾರೆ.

ಹಿಂದೂಧರ್ಮದ ಹೆಸರಿನ ಅಡಿಯಲ್ಲಿ ಕಾಣಬರುವ ಹಲವಾರು ಪವಿತ್ರ ಗ್ರಂಥಗಳು ಮತ್ತು ಅವಕ್ಕೆ ಸಂಬಂಧಿಸಿದ ಇತರೆ ಸಾಹಿತ್ಯದಲ್ಲಿ ಎರಡು ಲಕ್ಷಣಗಳನ್ನು ಸ್ಪಷ್ಟವಾಗಿ ಕಾಣುತ್ತೇವೆ:

೧. ಮೊದಲನೆಯದಾಗಿ, ಅವು ಸಂತರ ಮತ್ತು ಭಗವದ್ಭಕ್ತರ ನೂರಾರು ಅನುಭವಗಳನ್ನು ಪ್ರಾಮಾಣಿಕವಾಗಿ ದಾಖಲಿಸುತ್ತವೆ.

೨. ಎರಡನೆಯದಾಗಿ, ಅವು ತತ್ತ್ವಶಾಸ್ತ್ರದ ಯಾವುದಾದರೂ ನಿರ್ದಿಷ್ಟ ವಾದವನ್ನು ಪ್ರತಿಪಾದಿಸುತ್ತವೆ.

ಇನ್ನೊಂದು ಆಸಕ್ತಿಕರವಾದ ಅಂಶವೆಂದರೆ, ವೇದ ಮತ್ತು ಉಪನಿಷತ್ತುಗಳಲ್ಲಿ ಕಂಡುಬರುವ ಉದಾರ ಭಾವನೆ. ಅಲ್ಲಿನ ಹಲವಾರು ಅಭಿಪ್ರಾಯಗಳು ಮತ್ತು ವಾದಗಳಲ್ಲಿ ಯಾವ ಬಗೆಯ

ಸಂಕುಚಿತ ಮನೋಭಾವವನ್ನೂ ನಾವು ಕಾಣುವುದಿಲ್ಲ. ಆದರೆ ಆಮೇಲೆ ಬಂದ ಗ್ರಂಥಗಳಲ್ಲಿ ಒಂದು ರೀತಿಯ ಜಿಗುಟುತನವನ್ನು ಕಾಣುತ್ತೇವೆ. ಏಕೆಂದರೆ ಅವೆಲ್ಲ ಒಂದು ನಿರ್ದಿಷ್ಟ ತಾತ್ತ್ವಿಕ ವಾದವನ್ನು ಸಮರ್ಥಿಸುವ ಸಲುವಾಗಿ ಬರೆದ ಗ್ರಂಥಗಳು. ಇದರಿಂದಾಗಿ ಭಾರತದ ಇತಿಹಾಸದಲ್ಲಿ ಹಲವು ಶತಮಾನಗಳ ಕಾಲ ಅನವಶ್ಯಕವಾದ ತಾತ್ತ್ವಿಕ ವಾದವಿವಾದಗಳಲ್ಲೇ ಜನರ ಬೌದ್ಧಿಕ ಸಾಮರ್ಥ್ಯವು ಲುಪ್ತವಾಯಿತು. ಇದರಿಂದಾಗಿ ಅಗಾಧ ಪ್ರಮಾಣದಲ್ಲಿ ತಾತ್ತ್ವಿಕ ಸಾಹಿತ್ಯ ಸೃಷ್ಟಿಯಾಯಿತು ಎನ್ನುವುದೇನೋ ನಿಜ. ಪ್ರಪಂಚದಲ್ಲಿಯೇ ಅತ್ಯಂತ ಪ್ರತಿಭಾವಂತ ವ್ಯಕ್ತಿಗಳು ಈ ಸಾಹಿತ್ಯವನ್ನು ರಚಿಸಿದರೆಂಬುದೂ ನಿಜ. ಆದರೆ ಇದು ಒಟ್ಟಾರೆ ಸಮಾಜದ ಆಧ್ಯಾತ್ಮಿಕ ಉನ್ನತಿಗೆ ಕೊಡುಗೆ ನೀಡಿದ್ದು ಅತ್ಯಲ್ಪವೆಂದೇ ಹೇಳಬೇಕು. ಅದಕ್ಕೆ ಬದಲಾಗಿ ಬಹುಸಂಖ್ಯೆಯ ಜನಸಾಮಾನ್ಯರನ್ನು ಆಧ್ಯಾತ್ಮಿಕ ಪ್ರಭಾವದಿಂದ ಅದು ದೂರವಿಟ್ಟಿತು. ಇಂಥ ಬೌದ್ಧಿಕತೆಯೇ ನೈಜ ಆಧ್ಯಾತ್ಮಿಕ ದರ್ಶನದ ಮೇಲೆ ಯಾವಾಗ ಮೇಲುಗೈಯನ್ನು ಪಡೆದುಕೊಂಡಿತೋ, ಆಗ ಹಿಂದೂಸಮಾಜದ ಆಧ್ಯಾತ್ಮಿಕ ಅವನತಿ ಪ್ರಾರಂಭವಾಯಿತು. ಕಾಲಕಾಲಕ್ಕೆ ಅವತರಿಸಿ ಬಂದ ನೂರಾರು ಸಂತರು, ಮಹಾತ್ಮರು ಈ ಅಧಃಪತನವನ್ನು ತಡೆಯಲು ಪ್ರಯತ್ನಪಟ್ಟರು; ನೈತಿಕ ಮತ್ತು ಧಾರ್ಮಿಕ ಮೌಲ್ಯಗಳ ಪ್ರಸಾರದ ಮೂಲಕ ಜನಸಾಮಾನ್ಯರಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನು ಉಂಟುಮಾಡಿದರು. ಇದರಿಂದ ಸಮಾಜದ ಕೆಳವರ್ಗದವರು ಕೂಡ ಪ್ರಯೋಜನ ಹೊಂದಿದರು. ಆದರೂ, ಆಧುನಿಕ ಕಾಲದಲ್ಲಿ ಹಿಂದೂಧರ್ಮವು ಪಾಶ್ಚಾತ್ಯ ಚಿಂತನೆ ಮತ್ತು ಅದರ ಭೌತಿಕವಾದದ ಪ್ರಭಾವದ ಪ್ರವಾಹದ ಹೊಡೆತಕ್ಕೆ ಸಿಲುಕಿ ಅತಿ ಸಂಕಷ್ಟಕ್ಕೆ ಒಳಗಾಯಿತು.

ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತದೇಶಕ್ಕೆ, ತನ್ನ ಆಧ್ಯಾತ್ಮಿಕ ಶ್ರೇಷ್ಠತೆಯನ್ನು ಪುನಃ ಮೇಲೆತ್ತಿ ಮೆರೆಯುವ ಆವಶ್ಯಕತೆ ತಲೆದೋರಿತ್ತು. ಪವಿತ್ರಗ್ರಂಥಗಳಲ್ಲಿನ ಹಲವಾರು ತಾತ್ತ್ವಿಕ ವಿಚಾರಗಳ ಬಗ್ಗೆ ವಾಗ್ವಿವಾದಗಳನ್ನು ಮುಂದು ವರೆಸಿಕೊಂಡು ಹೋಗುವ ಕಾಲ ಅದಾಗಿರಲಿಲ್ಲ. ಅದಕ್ಕೆ ಬದಲಾಗಿ ಅವುಗಳಲ್ಲಿ ಅಡಕವಾಗಿರುವ ಶ್ರೇಷ್ಠ ಆಧ್ಯಾತ್ಮಿಕ ಮೌಲ್ಯಗಳ ಜೀವಂತ ನಿದರ್ಶನದ ಆವಶ್ಯಕತೆ, ಹಿಂದೆಂದಿಗಿಂತಲೂ ಹೆಚ್ಚಾಗಿತ್ತು. ಹಾಗೆಯೇ ಶಾಸ್ತ್ರಗ್ರಂಥಗಳಲ್ಲಿರುವ ದರ್ಶನಗಳು ಮತ್ತು ಸಿದ್ಧಿಗಳು ಸತ್ಯವಾದುವು ಮತ್ತು ಅಧಿಕೃತವಾದುವು ಎಂದು ಜಗತ್ತಿಗೆ ಪ್ರಮಾಣೀಕರಿಸಿ ತೋರಿಸಬೇಕಾಗಿತ್ತು. ಒಟ್ಟಿನಲ್ಲಿ ಶಾಸ್ತ್ರಗ್ರಂಥಗಳ ಕೇವಲ ಅಧ್ಯಯನಕ್ಕಿಂತ ಹೆಚ್ಚಾಗಿ, ಅವುಗಳನ್ನು ಅನುಷ್ಠಾನಕ್ಕೆ ತಂದ ವ್ಯಕ್ತಿಯೊಬ್ಬರ ಆವಶ್ಯಕತೆ ಕಂಡುಬಂದಿತ್ತು. ಏಕೆಂದರೆ ಹೀಗಾದಾಗ ಮಾತ್ರವೇ ಶಾಸ್ತ್ರಗ್ರಂಥಗಳು ಪ್ರತಿಪಾದಿಸುವ ಧರ್ಮ ಮತ್ತು ತತ್ತ್ವಶಾಸ್ತ್ರಗಳಿಗೆ ಅಧಿಕೃತತೆಯನ್ನು ದೊರಕಿಸಿ ಕೊಡಲು ಸಾಧ್ಯ; ಆ ಮೂಲಕ ಧರ್ಮದ ಪುನರುತ್ಥಾನವೂ ಸಾಧ್ಯ.

ವಿರೋಧಾಭಾಸವೋ ಎಂಬಂತೆ ಈ ಬೃಹದ್ ಜವಾಬ್ದಾರಿಯನ್ನು ಹೊತ್ತುಕೊಂಡು, ಸಮರ್ಥವಾಗಿ ನಿರ್ವಹಿಸಿದ ಮಹಾನ್‌ವ್ಯಕ್ತಿ, ಲೌಕಿಕ ದೃಷ್ಟಿಕೋನದಲ್ಲಿ 'ಅವಿದ್ಯಾವಂತರು' ಎಂದೇ ಪರಿಗಣಿಸಲ್ಪಟ್ಟಿದ್ದರು. ಅವರ ಪಾಲಿಗೆ ಬಂದ ಕಾರ್ಯ, ಶಾಸ್ತ್ರಗ್ರಂಥಗಳ ಅಧ್ಯಯನ ಮತ್ತು ವ್ಯಾಖ್ಯಾನವಾಗಿರಲಿಲ್ಲ. ಅದಕ್ಕೆ ಬದಲಾಗಿ, ಆ ಗ್ರಂಥಗಳ ಸಾರಸರ್ವಸ್ವವಾದ ಸತ್ಯತತ್ತ್ವಗಳು ಪ್ರಕಾಶಮಾನವಾಗಿ ಪ್ರಕಟವಾಗುವಂತಹ ದಿವ್ಯಜೀವನವನ್ನು ನಡೆಸುವುದಾಗಿತ್ತು. ಶ್ರೀರಾಮಕೃಷ್ಣರೆಂಬ ಹೆಸರಿನ ಈ ದಿವ್ಯ ಮಾನವರ ಪರಮಾದ್ಭುತ ಸಾಮರ್ಥ್ಯ ಇಲ್ಲಿ ಅಡಗಿತ್ತು. ಅವರು ತಮ್ಮ ಜೀವನವನ್ನು ಪ್ರಾಚೀನ ಆಧ್ಯಾತ್ಮಿಕ ಮೌಲ್ಯಗಳ ಪುನರುಜ್ಜೀವನಕ್ಕೆ ಒಂದು ಆದರ್ಶ ಭೂಮಿಕೆಯನ್ನಾಗಿ ರೂಪಿಸಿದರು. ಆಮೂಲಕ ಅವುಗಳನ್ನು ಪ್ರತಿಪಾದಿಸುವ ಶಾಸ್ತ್ರ ಗ್ರಂಥಗಳಿಗೂ ನವೀನ ಚೈತನ್ಯವನ್ನು ತುಂಬಿದರು.

**ವೇದ ಮತ್ತು ವೇದಾಂತ ದೃಷ್ಟಿಕೋನ:** 'ವೇದಾಂತ' ಎಂಬ ಪದವು ಉಪನಿಷತ್ತುಗಳನ್ನೂ ಮತ್ತು ಅವು ಬೋಧಿಸುವ ತತ್ತ್ವಶಾಸ್ತ್ರವನ್ನೂ ಸೂಚಿಸುತ್ತದೆ. ಉಪನಿಷತ್ತುಗಳು ವೇದಗಳ ಅವಿಭಾಜ್ಯ ಅಂಗಗಳು, ಸರಿ. ಆದರೆ ಅವುಗಳ ವಿಷಯವಸ್ತು ಮತ್ತು ಉದ್ದೇಶ ವೈದಿಕ ಸಾಹಿತ್ಯದ ಇತರ ಭಾಗಗಳಿಗಿಂತ ಭಿನ್ನವಾಗಿವೆ. ಸಂಹಿತೆಗಳು ಮತ್ತು ಬ್ರಾಹ್ಮಣ ಭಾಗಗಳಲ್ಲಿ ಯಜ್ಞ-ಯಾಗ ಮುಂತಾದ ಆಚರಣೆಗಳಿಗೆ ಮಹತ್ವ ನೀಡಲಾಗಿದೆ. ಆರಣ್ಯಕ ಮತ್ತು ಉಪನಿಷತ್ತುಗಳಲ್ಲಿ ತತ್ತ್ವಜ್ಞಾನ ಮತ್ತು ಉಪಾಸನೆ-ಧ್ಯಾನಗಳಿಗೆ ಪ್ರಾಮುಖ್ಯತೆ. ಬಾಹ್ಯ ಪ್ರವೃತ್ತಿಯಿಂದ ಆರಂಭವಾಗಿ, ಹಲವಾರು ವರ್ಷಗಳ ವಿಕಾಸದ ಮೂಲಕ ಆಂತರಿಕ ಪ್ರವೃತ್ತಿಯು ನಿಧಾನವಾಗಿ ಮೂಡಿಬರುವ ಪ್ರಶಾಂತ ಪರಿವರ್ತನೆಯನ್ನು ನಾವಿಲ್ಲಿ ನೋಡುತ್ತೇವೆ. ಈ ವಿಕಾಸ ಪ್ರಕ್ರಿಯೆ ತ್ವರಿತವಾಗಿಯೇನೂ ನಡೆಯಲಿಲ್ಲ. ಹಾಗೂ ಈ ಪ್ರವೃತ್ತಿಗಳಲ್ಲಿ ಪರಸ್ಪರ ವೈಮನಸ್ಯವಿರುವುದನ್ನು ನಾವು ವೈದಿಕ ಸಾಹಿತ್ಯದಲ್ಲಿ ಕಾಣುವುದಿಲ್ಲ. ವೈದಿಕಧರ್ಮವು ಪ್ರಪಂಚವಿಮುಖವಾದ ಧರ್ಮವಲ್ಲ. ಅದಕ್ಕೆ ಬದಲಾಗಿ ಈ ಜಗತ್ತಿನ ಜೀವನದ ಬಗ್ಗೆ ತುಂಬು ಆಶಾಭಾವನೆಯನ್ನೂ ಉತ್ಸಾಹವನ್ನೂ ನಾವಿಲ್ಲಿ ನೋಡುತ್ತೇವೆ. ಮಾನವ ಜೀವಿತದಲ್ಲಿ ಮತ್ತು ಅದರಲ್ಲಿನ ಲೌಕಿಕ ಅಥವಾ ಆಧ್ಯಾತ್ಮಿಕ ಯಶಸ್ಸು ಹಾಗೂ ಸಾಧನೆಗಳಲ್ಲಿ ಸಕಾರಾತ್ಮಕವೂ ಸಕ್ರಿಯಾತ್ಮಕವೂ ಆದ ಧೋರಣೆಯನ್ನು ಸ್ಪಷ್ಟವಾಗಿ ಭಾವಿಸುತ್ತೇವೆ. ಇದಲ್ಲದೆ, ಸರ್ವತೋಮುಖ 'ಜೀವನ ಸಂಭ್ರಮ'ವು ಅನುರಣಿತವಾಗಿ ಇರುವುದನ್ನೂ ಅನುಭವಿಸುತ್ತೇವೆ.

'ಬ್ರಹ್ಮನ್' ಎಂದು ಕರೆಯಲಾಗುವ ಅಖಂಡ ವಿಶ್ವತತ್ತ್ವವು ಪ್ರತಿಯೊಬ್ಬ ಜೀವಿಯ ಅಂತಸ್ಸತ್ವವಾದ 'ಆತ್ಮ'ಕ್ಕಿಂತ ಅಭಿನ್ನವಾದುದು ಎಂದು ವೇದಾಂತ ಪ್ರತಿಪಾದಿಸುತ್ತದೆ. ಈ ಅಖಂಡ ಜ್ಞಾನದ ನಿರಂತರ, ರೋಮಾಂಚಕಾರಿ ಹಾಗೂ ಮನೋಹರ ಅನ್ವೇಷಣಾ ಪಯಣವನ್ನು ನಾವು ಉಪನಿಷತ್ತುಗಳಲ್ಲಿ ಕಾಣುತ್ತೇವೆ. ಹಾಗೆಂದು ವೇದಾಂತವು ಲೌಕಿಕ ಬದುಕನ್ನೇನೂ ಅಲ್ಲಗಳೆಯುವುದಿಲ್ಲ. ಮೇಲೆ ಹೇಳಿದ ಅಖಂಡ ತತ್ತ್ವಜ್ಞಾನದ ಬೆಳಕಿನಲ್ಲಿ ಪ್ರಪಂಚವನ್ನೂ ಮತ್ತು ಮಾನವ ಜೀವಿತವನ್ನೂ ಸರಿಯಾದ ಮತ್ತು ವಾಸ್ತವಿಕ ದೃಷ್ಟಿಕೋನದಿಂದ ಅರ್ಥ

ಮಾಡಿಕೊಳ್ಳುವ ಪ್ರಯತ್ನವನ್ನು ವೇದಗಳು ಮತ್ತು ವೇದಾಂತ – ಎರಡೂ ಮಾಡುತ್ತವೆ. ಈ ಪ್ರಯತ್ನವು ಲೌಕಿಕ ಜಗತ್ತಿನ ಸೀಮಿತತೆಗಳಿಂದ ಮತ್ತು ಬಂಧನಗಳಿಂದ ಬಿಡಿಸಿಕೊಂಡು, ತತ್ತ್ವಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ತುಮುಲದಿಂದ ಮೂಡಿದ್ದಾಗಿದೆ. ಲೌಕಿಕ ಅಸ್ತಿತ್ವದ ಅರ್ಥಹೀನತೆಯ ಸ್ಪಷ್ಟ ಅರಿವಿನ ಮೂಲಕ ಪಾರಮಾರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದೇ ಭಾರತೀಯ ಆಧ್ಯಾತ್ಮಿಕ ನಿಲುವಾಗಿದೆ. ಶ್ರೀರಾಮಕೃಷ್ಣರು ವೇದ ಮತ್ತು ವೇದಾಂತಗಳಲ್ಲಿ ಕಂಡುಬರುವ ಮೇಲಿನ ಮೂಲಭೂತ ಲಕ್ಷಣಗಳೆಲ್ಲದರ ಮೂರ್ತರೂಪರಾಗಿದ್ದಾರೆ ಎನ್ನಬಹುದು. ಆ ತತ್ತ್ವಗಳನ್ನು ಅತ್ಯಂತ ಉನ್ನತ ಸ್ತರದಲ್ಲಿ, ಉದಾತ್ತ ರೀತಿಯಲ್ಲಿ ಮತ್ತು ಪರಿಶುದ್ಧ ರೂಪದಲ್ಲಿ ಶ್ರೀರಾಮಕೃಷ್ಣರು ತಮ್ಮ ವ್ಯಕ್ತಿತ್ವ ಮತ್ತು ಸಾಧನಾ ಜೀವಿತಗಳಲ್ಲಿ ವ್ಯಕ್ತಪಡಿಸುತ್ತಾರೆ. ಅವರದು ವೇದವೇದಾಂತಗಳ ಸಾರಭೂತವಾದ ವ್ಯಕ್ತಿತ್ವ. ಇದರ ಸಾರಸತ್ವವನ್ನೇ ಅವರು ಸರಳಭಾಷೆಯಲ್ಲಿ ತಮ್ಮ ಅನುಯಾಯಿಗಳಿಗೆ ಬೋಧಿಸಿ, ಅವರಲ್ಲೂ ಈ ವಿಶ್ವವ್ಯಾಪಕ ಭಾವನೆಗಳನ್ನು ಉದ್ದೀಪಿಸಿದರು. ಹೀಗೆ ಶ್ರೀರಾಮಕೃಷ್ಣರ ಜೀವನವು ಶತಶತಮಾನಗಳಷ್ಟು ಪ್ರಾಚೀನವಾದ ವೈದಿಕ ಆದರ್ಶದ ಪರಿಪೂರ್ಣ ಮತ್ತು ಪರಿಶುದ್ಧ ಪುನರುಜ್ಜೀವನವನ್ನು ಸಂಕೇತಿಸುತ್ತದೆ. ಇದು ಮಧ್ಯಕಾಲೀನ ಯುಗದಲ್ಲಿ ಕಂಡುಬಂದ ಯಾವುದೇ ಸಾಂಪ್ರದಾಯಿಕ ತತ್ತ್ವಶಾಸ್ತ್ರ ಸಿದ್ಧಾಂತಕ್ಕೆ ಹೋಲಿಸಿದಲ್ಲಿ ಅನಂತದಷ್ಟು ಉದಾರದೃಷ್ಟಿಯನ್ನೂ, ವಿಶ್ವವ್ಯಾಪಕ ಮನೋಭಾವವನ್ನೂ ಹೊಂದಿದೆ. ಶ್ರೀರಾಮಕೃಷ್ಣರು ಆಧುನಿಕ ಆಧ್ಯಾತ್ಮಿಕ ಪ್ರವಾದಿ ಮಾತ್ರವಲ್ಲದೆ, ಭಾರತೀಯ ಸಂಸ್ಕೃತಿಯ ಮೂಲ ಆಕರವಾದ ವೈದಿಕ ಸಂಸ್ಕೃತಿಯ ಪುನರುದ್ಧಾರಕರೂ ಆಗಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

**ಅನುಭಾವ ದೃಷ್ಟಿಕೋನ:** ಹಿಂದೂ ಧರ್ಮಗ್ರಂಥಗಳಲ್ಲಿ ಮಹಾತ್ಮರ ಮತ್ತು ಸಂತರ ದಿವ್ಯ ಅನುಭವಗಳ ಕೂಲಂಕಷ ವಿವರಣೆಯನ್ನು ಕಾಣುತ್ತೇವೆ. ಇದಕ್ಕೆ ಶಿವಶರಣರ ಪರಿಭಾಷೆಯಲ್ಲಿ 'ಅನುಭಾವ' ಎಂದು ಹೆಸರು. ಇಂಥ ಅನುಭವಗಳನ್ನು ವ್ಯಕ್ತಪಡಿಸುವಲ್ಲಿ ಧರ್ಮಗ್ರಂಥಗಳು ವೈವಿಧ್ಯಮಯ ಪ್ರಕಾರಗಳನ್ನು ತಳೆದಿದ್ದರೂ, ಆ ಎಲ್ಲ ಅನುಭವಗಳೂ ಇಂದ್ರಿಯಾತೀತವಾದುವು ಎನ್ನುವುದರಲ್ಲಿ ಅವುಗಳಲ್ಲಿ ಐಕ್ಯಮತ್ಯವಿದೆ. ಬಹುಶಃ ಆ ಎಲ್ಲ ಅನುಭವಗಳ ಪ್ರತ್ಯಕ್ಷ ಪ್ರದರ್ಶನವನ್ನು ನಾವು ಶ್ರೀರಾಮಕೃಷ್ಣರ ಜೀವನದಲ್ಲಿ ನೋಡುತ್ತೇವೆ. ಶ್ರೀಅರವಿಂದರು ಹೇಳುವಂತೆ, ಹಿಂದೆ ಆಗಿಹೋದ ಸಾವಿರಾರು ಸಂತ ಮಹಾತ್ಮರ ಆಧ್ಯಾತ್ಮಿಕ ಅನುಭವಗಳ ನವೀಕರಣವನ್ನು ಮತ್ತು ಸಾಮರಸ್ಯವನ್ನು ಶ್ರೀರಾಮಕೃಷ್ಣರಲ್ಲಿ ಕಾಣಬಹುದು. ಈ ರೀತಿಯಲ್ಲಿ ಅವರು ಶಾಸ್ತ್ರಗ್ರಂಥಗಳು ದಾಖಲಿಸುವ ಆಧ್ಯಾತ್ಮಿಕ ದರ್ಶನಗಳ ಜೀವಂತ ನಿದರ್ಶನವಾಗಿದ್ದಾರೆ.

ಪವಿತ್ರ ಗ್ರಂಥಗಳಲ್ಲಿ ದಾಖಲಾಗಿರುವ ದಾರ್ಶನಿಕ ಅನುಭವಗಳು ಪರಸ್ಪರ ವಿರುದ್ಧವಾಗಿವೆ ಎಂದು ಕೆಲವೊಮ್ಮೆ ಅನ್ನಿಸಬಹುದು. ಸ್ವಾರಸ್ಯದ ಅಂಶವೆಂದರೆ, ಶ್ರೀರಾಮಕೃಷ್ಣರಲ್ಲಿ ಅವೆಲ್ಲವೂ ಪರಿಪೂರ್ಣ ಸಾಮರಸ್ಯವನ್ನು ಹೊಂದಿವೆ. ಒಬ್ಬ ಭಕ್ತನಾಗಿ ಅವರು ರಾಮ, ಕೃಷ್ಣ ಮುಂತಾದ ಹಲವಾರು ದೇವತಾರೂಪಗಳ ದರ್ಶನಗಳನ್ನು ಪಡೆದುಕೊಂಡರು. ಅನಂತರ ಅವರ ಮನಸ್ಸು ಅತ್ಯಂತ ಉನ್ನತವಾದ ಅದ್ವೈತಾನುಭೂತಿಯ ಪರಾಕಾಷ್ಠೆಯನ್ನು ಏರಿತು. ಮುಂದೆ ಅವರು ಶ್ರದ್ಧಾಳುವಾದ ಒಬ್ಬ ಮುಸಲ್ಮಾನ ಅಥವಾ ಕ್ರೈಸ್ತ ಹೊಂದಿರುವ ವಿಶಿಷ್ಟ ಭಕ್ತಿಭಾವದಲ್ಲಿಯೂ ಲೀನರಾದರು. ಹೀಗೆ ಅನುಭಾವದ ಅತ್ಯುತ್ಕೃಷ್ಟ ಅಭಿವ್ಯಕ್ತಿಗಳೆಲ್ಲವೂ ಶ್ರೀರಾಮಕೃಷ್ಣರ ವಿಶ್ವಾತ್ಮಕ ವ್ಯಕ್ತಿತ್ವದಲ್ಲಿ ಸುಂದರವಾಗಿ ಬೆಸುಗೆಗೊಂಡವು. ಈ ಬಗೆಯ ದಾರ್ಶನಿಕ ಸಿದ್ಧಿಯಿಂದ, ಅವರು ದರ್ಶನಗಳು ಮತ್ತು ಅನುಭಾವಗಳ ನಡುವಣ ಸಾಮರಸ್ಯವನ್ನು ಪ್ರತಿನಿಧಿಸುತ್ತಾರೆ. ಅದು ಮಾತ್ರವಲ್ಲ, ಅವುಗಳ ಅಧಿಕೃತ ದಾಖಲೆಗಳಾದ ಶಾಸ್ತ್ರಗ್ರಂಥಗಳ ಸಾಮರಸ್ಯದ ಪ್ರತಿರೂಪರಾಗಿಯೂ ಕಂಗೊಳಿಸುತ್ತಾರೆ.

**ತಾತ್ತ್ವಿಕ ದೃಷ್ಟಿಕೋನ:** ಶಾಸ್ತ್ರಗ್ರಂಥಗಳು ಅವುಗಳ ರಚನಾಕಾಲದಲ್ಲಿ ಪ್ರಚಲಿತವಾಗಿದ್ದ ತಾತ್ತ್ವಿಕ ಅಭಿಪ್ರಾಯಗಳ ಕೋಶಾಗಾರಗಳು ಕೂಡ ಹೌದು. ವೇದ ಮತ್ತು ವೇದಾಂತಗಳಲ್ಲಿ ವಿವಿಧ ರೂಪದ ತಾತ್ತ್ವಿಕ ವಾದಗಳು ಕಂಡುಬರುತ್ತವೆ. ಆದರೂ, ಅವುಗಳನ್ನು ಒಗ್ಗೂಡಿಸಿ, ಒಂದೇ ನಿಷ್ಕರ್ಷೆಗೆ ಬರುವ ಪ್ರಯತ್ನವನ್ನೇನೂ ಆ ಮೂಲಗ್ರಂಥಗಳಲ್ಲಿ ನಾವು ಕಾಣುವುದಿಲ್ಲ. ಒಂದು ಗ್ರಂಥದಲ್ಲಿಯೇ **'ಮಾನವ'**, **'ದೇವರು'** ಮತ್ತು **'ಜಗತ್ತು'** – ಈ ಮೂಲಭೂತ ತಾತ್ತ್ವಿಕ ಅಂಶಗಳ ಬಗ್ಗೆ ಹಲವು ದೃಷ್ಟಿಕೋನಗಳು ಅಡಕವಾಗಿರುವುದಕ್ಕೂ ಸಾಧ್ಯ. ಇಂಥ ಅನುಪಮ ಉದಾರದೃಷ್ಟಿಯು, ಕಾಲ ಕಳೆದಂತೆ, ವಿವಿಧ ದರ್ಶನ ಶಾಖೆಗಳಾಗಿ ಕವಲೊಡೆಯಿತು. ಆ ಶಾಖೆಗಳ ಅನುಯಾಯಿಗಳು ತಮ್ಮ ವಾದವೇ ನಿಜವಾದ ತತ್ತ್ವವೆಂದು ಪಟ್ಟುಹಿಡಿಯಲಾರಂಭಿಸಿದರು. ಇದರಿಂದಾಗಿ ಭಾರೀ ವಾಗ್ವಿವಾದಗಳ ಸರಣಿಯೇ ಪ್ರಾರಂಭವಾಯಿತು. ಇಂಥ ಎಲ್ಲ ವಿಭಿನ್ನ ತಾತ್ತ್ವಿಕ ಭಿನ್ನತೆಗಳಿಗೂ ಅವಕಾಶವೀಯುವ, ಹಲವಾರು ಪಂಗಡಗಳ ಒಕ್ಕೂಟವೇ ಹಿಂದೂಧರ್ಮ. ನಮ್ಮ ಸನಾತನ ಧರ್ಮದ ಈ ಸರ್ವಾತ್ಮಕ ಚಿತ್ರಣವನ್ನು ವಿಶ್ವಾತ್ಮಭಾವನೆಯ ಮೂರ್ತಿರೂಪರಾದ ಶ್ರೀರಾಮಕೃಷ್ಣರಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಆದ್ದರಿಂದ, ಶ್ರೀರಾಮಕೃಷ್ಣರು ಮಾತ್ರವೇ ವೈದಿಕ ಋಷಿಗಳ ಉದಾರ ತಾತ್ತ್ವಿಕ ದೃಷ್ಟಿಗೆ ಅತ್ಯಂತ ಸಮೀಪರಾಗಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಅವರು ಯಾವುದೇ ತಾತ್ತ್ವಿಕ ಅಭಿಪ್ರಾಯಕ್ಕೆ ಅಂಟಿಕೊಂಡವರಲ್ಲ. ತಮ್ಮ ವೈವಿಧ್ಯಮಯವಾದ ಆಧ್ಯಾತ್ಮಿಕ ದರ್ಶನಗಳು ಮತ್ತು ಅವುಗಳ ಫಲಶ್ರುತಿಯಾದ ಬೌದ್ಧಿಕ ಪರಿಪಕ್ವತೆಯಿಂದ ಅವರು ಎಲ್ಲ ರೀತಿಯ ತಾತ್ತ್ವಿಕ ಪ್ರಭೇದಗಳನ್ನೂ ಒಂದು ಸಮಾನ ಭೂಮಿಕೆಯಲ್ಲಿ ಒಗ್ಗೂಡುವಂತೆ ಮಾಡಿದರು. ಹಾಗೆಯೇ ಅವುಗಳಲ್ಲಿ ಪ್ರತಿಯೊಂದರ ಮೇಲೆಯೂ ತಮ್ಮ ಅನುಭವದ ಅಧಿಕೃತ ಮುದ್ರೆಯನ್ನು ಪ್ರತಿಷ್ಠಾಪಿಸಿದರು.

ಶ್ರೀರಾಮಕೃಷ್ಣರ ಅಭಿಪ್ರಾಯದಂತೆ, ಶಾಸ್ತ್ರಗ್ರಂಥಗಳಲ್ಲಿ ಕಾಣಬರುವ ವಿವಿಧ ವಾದಗಳೆಲ್ಲವೂ ಸತ್ಯತತ್ತ್ವದ ವಿವಿಧ ಅಭಿವ್ಯಕ್ತಿಗಳು ಮಾತ್ರ. ಈ ಅಭಿಪ್ರಾಯಗಳು ವೈವಿಧ್ಯಮಯ ವಾಗಿದ್ದರೂ, ಅವುಗಳ ಮಧ್ಯೆ ಕಲಹದ ಆವಶ್ಯಕತೆಯೇನೂ ಇಲ್ಲ. ಏಕೆಂದರೆ ಆ ತತ್ತ್ವವು ಏಕವೂ ಸಮಾನವೂ ಆಗಿದೆ ಎಂದು ಅವರು ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ನಮ್ಮ ಈ ಚರ್ಚೆಯಿಂದ ಅದ್ಭುತವಾದ ಸಂಗತಿಯೊಂದು ಮೂಡಿ ಬರುವುದು. ಅದೇನೆಂದರೆ, ಉನ್ನತಸ್ತರದಿಂದ ನೋಡಿದಾಗ ವಿರೋಧಾತ್ಮಕ ವಿಚಾರಗಳು ಕೂಡ ಪ್ರಸಕ್ತವಾಗಬಲ್ಲವು ಮತ್ತು ಯಥಾರ್ಥವಾಗಬಲ್ಲವು ಎನ್ನುವುದು. ಈ ನಿಟ್ಟಿನಿಂದ ನೋಡು ವುದಾದರೆ, ಕೆಲವು ಸಾಂಪ್ರದಾಯಿಕ ತಾತ್ತ್ವಿಕ ಪಂಗಡಗಳು ಮುಂದಿಡುವ **'ಏಕವಾಕ್ಯತಾ'** ಅಥವಾ 'ಶಾಸ್ತ್ರವಾಕ್ಯಗಳ ಏಕರೂಪತೆ'ಯ ವಾದವನ್ನು ಶ್ರೀರಾಮಕೃಷ್ಣರು ಒಪ್ಪುವುದಿಲ್ಲ ಎಂದೆನಿಸುತ್ತದೆ. ಶಾಸ್ತ್ರಗ್ರಂಥಗಳ ತಾತ್ಪರ್ಯವು ಒಂದೇ ಅಭಿಪ್ರಾಯ ಅಥವಾ ನಿಷ್ಕರ್ಷೆ ಎನ್ನುವ ವಾದ ಅದು. ಈ ವಿಚಾರದಲ್ಲಿ ಅವರ ದೃಷ್ಟಿಕೋನವು ವಿಶ್ವಾತ್ಮಕವಾದುದು ಮತ್ತು ಎಲ್ಲವನ್ನೂ, ಎಲ್ಲರನ್ನೂ ತಬ್ಬಿಕೊಳ್ಳುವಂಥದ್ದು. ಇದೇ ಪ್ರಾಚೀನ ಶಾಸ್ತ್ರ ಗ್ರಂಥಗಳ ನೈಜ ಆಶಯ ಮತ್ತು ಗುರಿಯೂ ಆಗಿತ್ತು ಎಂಬುದು ನಿಸ್ಸಂದೇಹ.

**ಉಪಸಂಹಾರ:** ವೇದಕಾಲದ ನಂತರ ಉಗಮಿಸಿದ ಧರ್ಮ ಗ್ರಂಥಗಳು ಅವತಾರ ತತ್ತ್ವವನ್ನು ಉಲ್ಲೇಖಿಸುತ್ತವೆ. ಅವುಗಳಲ್ಲಿ ವಿವರಿಸಿರುವ ಅವತಾರದ ಎಲ್ಲ ಲಕ್ಷಣಗಳೂ ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿ ಆದರ್ಶರೂಪದಲ್ಲಿ ಒಡಮೂಡಿರುವುದನ್ನು ಕಾಣಬಹುದು. ಈ ದೃಷ್ಟಿಯಲ್ಲಿಯೂ ಅವರು ಶಾಸ್ತ್ರದ ವಿಚಾರಗಳಿಗೆ ಅಧಿಕೃತತೆಯನ್ನು ತಂದುಕೊಟ್ಟ ಯುಗಪುರುಷರಾಗಿದ್ದಾರೆ. ಇದಲ್ಲದೆ, ಅವರ ಸಾಧನಾಗಾಥೆಯಂತೂ ಭಾರತದ ಆಧ್ಯಾತ್ಮಿಕ ಇತಿಹಾಸದಲ್ಲಿಯೇ ಅತ್ಯಂತ ಮನೋಜ್ಞವೂ, ನಿಸ್ಸೀಮವೂ ಆದದ್ದು. ಅವರು ಋಗ್ವೇದದ **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** – 'ಸತ್ಯ ಒಂದೇ, ತಿಳಿದವರು ಅದನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ' ಎನ್ನುವ ಉದಾರ ಭಾವನೆಯ ಜೀವಂತಮೂರ್ತಿಯಾಗಿದ್ದರು. ಹಾಗೆಂದೇ, ಮೇಲ್ನೋಟಕ್ಕೆ ಪರಸ್ಪರ ವಿರುದ್ಧ ದಿಕ್ಕುಗಳನ್ನು ತಳೆಯುವ ಸಾಧನಾ ಮಾರ್ಗಗಳನ್ನು ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿ, ಅವೆಲ್ಲವೂ ಒಬ್ಬನೇ ಭಗವಂತನ ಕಡೆಗೆ ಹೋಗುವ ವಿವಿಧ ದಾರಿಗಳು ಎಂದು ತೋರಿಸಿಕೊಟ್ಟರು. ಈ ನಿಟ್ಟಿನಲ್ಲಿ ಅವರ ಸಾಧನೆಯೂ ಶಾಸ್ತ್ರಸಮ್ಮತವಾಗಿಯೇ ಇದೆ. ಇದಲ್ಲದೆ, ಅವರ ವ್ಯಕ್ತಿತ್ವ ಮತ್ತು ಉಪದೇಶಗಳೂ ಕೂಡ ಶಾಸ್ತ್ರಗಳ ಬೋಧನೆಗೆ ಅನುಗುಣವಾಗಿಯೇ ಇವೆ ಎಂದು ಹೇಳಬಹುದು.

ಕೂಲಂಕಷವಾಗಿ ನೋಡಿದಾಗ ಶ್ರೀರಾಮಕೃಷ್ಣರು, ಉಪನಿಷತ್ತುಗಳು ಪ್ರತಿಪಾದಿಸುವ ಜ್ಞಾನಿಯ ಎಲ್ಲ ಲಕ್ಷಣಗಳನ್ನೂ ತಮ್ಮ ಜೀವನದಲ್ಲಿ ಪ್ರಕಟಪಡಿಸುತ್ತಾರೆ. ಹಾಗೆಯೇ ಭಗವದ್ಗೀತೆಯು ಉಲ್ಲೇಖಿಸುವ **ಸ್ಥಿತಪ್ರಜ್ಞ, ಭಕ್ತ, ಜ್ಞಾನಿ** ಮತ್ತು **ಗುಣಾತೀತನ** ಲಕ್ಷಣಗಳನ್ನೂ ತಮ್ಮಲ್ಲಿ ಪರಿಪೂರ್ಣವಾಗಿ ತೋರ್ಪಡಿಸುತ್ತಾರೆ. ಹಾಗೆಯೇ ಶ್ರೀಕೃಷ್ಣನು ಗೀತೆಯಲ್ಲಿ ಬೋಧಿಸುವ ಕರ್ಮ, ಭಕ್ತಿ, ಜ್ಞಾನ ಮತ್ತು ಧ್ಯಾನ ಯೋಗಗಳ ಸಮನ್ವಯಮೂರ್ತಿಯಾಗಿಯೂ ಕಂಗೊಳಿಸುತ್ತಾರೆ. ಇದಲ್ಲದೆ, ಶ್ರೀಮದ್ಭಾಗವತವು ಎತ್ತಿಹಿಡಿಯುವ ಅತ್ಯುತ್ಕೃಷ್ಟ ಭಕ್ತಿತತ್ತ್ವಕ್ಕೆ ಆದರ್ಶ ನಿದರ್ಶನವಾಗಿದ್ದಾರೆ. ಈ ಎಲ್ಲ ಧರ್ಮಗ್ರಂಥಗಳಲ್ಲಿ ಕಾಣಬರುವ ವಿಚಾರಗಳಲ್ಲಿ ಮತ್ತು ಶ್ರೀರಾಮಕೃಷ್ಣರ ಬೋಧನೆಗಳಲ್ಲಿ ಅನೇಕ ಸಮಾನ ಅಂಶಗಳು ಇರುವುದನ್ನು ಸುಲಭವಾಗಿ ಗಮನಿಸಬಹುದು.

ಇನ್ನೂ ಗಂಭೀರವಾಗಿ ವಿಚಾರ ಮಾಡಿದಾಗ, ಶ್ರೀರಾಮಕೃಷ್ಣರ ವಿಶ್ವಾತ್ಮಕ ಉದಾರ ಭಾವನೆಯ ಬೆಳಕಿನಲ್ಲಿ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿದಾಗ ಮಾತ್ರವೇ, ಅವುಗಳ ನೈಜ ತತ್ತ್ವವು ಸರಿಯಾಗಿ ತಿಳಿಯುತ್ತದೆ ಎನ್ನುವುದು ಗೋಚರವಾಗದೆ ಇರದು. ಇಲ್ಲದಿದ್ದರೆ, ಆ ಪವಿತ್ರ ಗ್ರಂಥಗಳ ಭಾಗಶಃ ಅಭಿಪ್ರಾಯವಷ್ಟೇ ನಮ್ಮ ಸಂಕುಚಿತ ಬುದ್ಧಿಗೆ ಅರಿವಾಗಲು ಸಾಧ್ಯ.

ಒಟ್ಟಿನಲ್ಲಿ, ಧರ್ಮಗ್ರಂಥಗಳು ಹಿಂದೂ ಶ್ರದ್ಧಾಳುಗಳ ಒಟ್ಟಾರೆ ಸಮಷ್ಟಿ ಪ್ರಜ್ಞೆಯನ್ನು ಅಭಿವ್ಯಕ್ತಪಡಿಸುತ್ತವೆ. ಶ್ರೀರಾಮಕೃಷ್ಣರ ವೈಶಿಷ್ಟ್ಯವೆಂದರೆ, ಅವರು ತಮ್ಮ ಜೀವಮಾನದಲ್ಲಿ ಅಪಾರವಾದ ಆಧ್ಯಾತ್ಮಿಕ ಶಕ್ತಿಯನ್ನು ಪ್ರದರ್ಶಿಸಿದರು. ಆಮೂಲಕ, ಎಲ್ಲ ಶಾಸ್ತ್ರ ಗ್ರಂಥಗಳ ಸತ್ವಸ್ವರೂಪರಾದರು. ರೋಮಾ ರೋಲಾ ಹೇಳುವಂತೆ, "ಮೂವತ್ತು ಕೋಟಿ ಜನರ, ಎರಡು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನದ ಸುಸಂಪನ್ನ ಮೂರ್ತಿಯಾದರು."

## ನೇತಿ ನೇತಿ... ನೇತಿ ನೇತಿ...

ಗೆಳೆಯರೊಬ್ಬರ ಕೂಡಿ ಹಿರಿಯರೊಬ್ಬರ ಮನೆಗೆ ಹೋಗಿದ್ದೆಯೊಮ್ಮೆ.
ಕರೆಗಂಟೆಯ ಕೇಳಿ ಸಡಗರದಿ ಹೊರಬಂದು ಕದವ ತೆರೆದು
ಒಳಗೆ ಕರೆದು, ಕೂರಿಸಿದರೆಮ್ಮನ್ನು ನಡುಮನೆಯ ಒಳಗೆ
ಬಿಡದೆ ಕುಳಿತರು ನಮ್ಮ ಮನದ ಒಳಗೆ. ಸಹಧರ್ಮಿಣಿಯ ಕರೆಯೆ;
ತಾಯಿ ಹೊರಬಂದರು ಭಗವತಿಯೆ ಬಂದಂತೆ ಬೆಳಕ ಹರಡಿ !
ಆ ಮಾತು, ಈ ಮಾತು, ಉಪಹಾರ, ಉಪಚಾರ,
ಉಭಯ ಕುಶಲೋಪರಿಯಲಿ ತೇಲುತಿರಲು
ಮನಗಳೆರಡರ ತೆರದಿ ಮನೆಯು 'ಮಡಿ'ಯಾಗಿರಲು
ಒಳಗೆ ಹೊರಗೆ;
ಕೌತುಕದಿ ಕೇಳಿದೆನು ಎಷ್ಟು ವರುಷಗಳಾಯ್ತು ಮನೆಯ ಕಟ್ಟಿ ?
ಮನೆ 'ನಮ್ಮದಲ್ಲ' ಬಾಡಿಗೆಯದೆನಲು
ಮನೆಯೇಕೆ ಕಟ್ಟಿಲ್ಲ ? 'ಹಣದ ಕೊರತೆಯೆ' ಎಂದು
ಬಿಡದೆ ಬೆಸಸಿದೆನು ಬೆರಗ ಬೆರಸಿ !
ಕೊರತೆ ಅನಿತೇನಿಲ್ಲ ; ಪ್ರಾಧ್ಯಾಪಕ ವೃತ್ತಿಯಂ ನಿವೃತ್ತರಾಗಿಹೆವು,
'ಗಳಿಸಿ' 'ಬಳಸಿ' 'ಉಳಿಸಿದುದ' ಬ್ಯಾಂಕಿನಲ್ಲಿರಿಸಿಹೆವು.
'ನಾವಳಿದ ಮೇಲೆ' ಧರ್ಮಸಂಸ್ಥೆಗಳಿಗೆ, ಹಂಚಿ 'ಉಯಿಲು' ಬರೆಸಿ;
ಅಲ್ಲಿರಲು 'ನಮ್ಮ ಮನೆ' ಸುಮ್ಮನೇಕಿಲ್ಲಿ 'ಮನೆ' ?
ಎಂಬುದು ನಮ್ಮ ರೀತಿ.
'ಗಳಿಸಿ' 'ಉಳಿಸಿ' ಹೋದರೆ ಮತ್ತೆ ಬರಬೇಕೆಂಬುದು ನಮ್ಮ ನೀತಿ
ಬೆದಕಿ ನೋಡಲು ಬದುಕೆ ನೇತಿ ನೇತಿ... ಎಲ್ಲಾ ನೇತಿ ನೇತಿ...

*– ಡಿ. ಕೆ. ಈರೇಗೌಡ*